ಅವನು ಎಂ.ಟೆಕ್ ಮಾಡಿ ಮೈಸೂರಿನ ಪ್ರತಿಷ್ಠಿತ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿದ್ದ. ತನ್ನ ಜೊತೆಯಲ್ಲೇ ಕೆಲಸ ಮಾಡುತ್ತಿದ್ದ ಶಿವಾನಿಯನ್ನು ಪ್ರೀತಿಸಿದ್ದ. ಅವನ ಆಸೆಗೆ ಮನೆಯವರು ಅಡ್ಡಿ ಬಂದಿರಲಿಲ್ಲ.

ಸೂರ್ಯ ಕೆಲಸಕ್ಕೆ ಸೇರಿದ್ದ ಮೂರು ವರ್ಷಗಳಲ್ಲಿ ಇಬ್ಬರು ತಂಗಿಯರ ಮದುವೆಮಾಡಿ ಮುಗಿಸಿದ್ದ. ದೊಡ್ಡ ತಂಗಿ ಚೆನ್ನೈನಲ್ಲಿದ್ದಳು. ಚಿಕ್ಕವಳು ಹಿಂದೂಪುರದಲ್ಲಿದ್ದಳು. ಸೂರ್ಯನ ತಂದೆತಾಯಿ ಅವನ ಮದುವೆಗೆ ಒತ್ತಾಯಿಸಿದ್ದರು. ಸೂರ್ಯ ತನ್ನ ಜೊತೆ ಕೆಲಸ ಮಾಡುತ್ತಿದ್ದ ರಚನಾಳನ್ನು ಮೆಚ್ಚಿದ್ದ. ರಚನಾ ಅವನಂತೆ ಮಧ್ಯಮವರ್ಗದ ಕುಟುಂಬಕ್ಕೆ ಸೇರಿದ್ದಳು. ತಂದೆ ಇರಲಿಲ್ಲ. ಅವಳ ಇಬ್ಬರು ಅಕ್ಕಂದಿರು ಪಿ.ಯು.ಸಿ.ಯಾಗುತ್ತಿದ್ದಂತೆ ಕೆಲಸಕ್ಕೆ ಸೇರಿ, ತಂಗಿಯನ್ನು ಬಿ.ಇ. ಓದಿಸಿದ್ದರು. ರಚನಾ ಕೆಲಸಕ್ಕೆ ಸೇರಿ ಅಕ್ಕಂದಿರ ಮದುವೆಗೆ ನೆರವಾಗಿದ್ದಳು. ಅವರ ಮನೆಯವರಿಗೂ ಸೂರ್ಯ ಇಷ್ಟವಾಗಿದ್ದ.

"ಮನೆಮಟ್ಟಿಗೆ ಎಂಗೇಜ್ಮೆಂಟ್ ಮಾಡಿ, ಧರ್ಮಸ್ಥಳದಲ್ಲಿ ಮದುವೆ ಮಾಡಿದರಾಯ್ತು, ಆಮೇಲೆ ಬಂಧುಗಳಿಗೆ ಸ್ನೇಹಿತರಿಗೆ ರಿಸೆಪ್ಷನ್ ಕೊಟ್ಟರಾಯ್ತು" ಎಂದು ಸೂರ್ಯನ ತಂದೆ ಚಂದ್ರಶೇಖರ್ ಹೇಳಿದ್ದರು. ಹೆಣ್ಣು ಹೆತ್ತವರ ಕಷ್ಟ ಗೊತ್ತಿದ್ದ ರಾಧಮ್ಮ ಗಂಡನ ಮಾತಿಗೆ ಬೇಡ ಎಂದಿರಲಿಲ್ಲ.

ಈ ಮಧ್ಯೆ ಸುಮೇರು ಎಂಗೇಜ್ಮೆಂಟ್ ತುಂಬಾ ವಿಜೃಂಭಣೆಯಿಂದ ನಡೆದಿತ್ತು. ಸೂರ್ಯ ನಿಶ್ಚಿತಾರ್ಥದಲ್ಲಿ ಸಂಭ್ರಮದಿಂದ ಓಡಾಡಿದ್ದ. ಗೆಳೆಯ ಶಿವಾನಿಯನ್ನು ಹುಚ್ಚನಂತೆ ಆರಾಧಿಸುತ್ತಿರುವುದು ಸೂರ್ಯನ ಗಮನಕ್ಕೂ ಬಂದಿತ್ತು. ಮಾರ್ಚ್ 7ರಂದು ದೊಡ್ಡಛತ್ರದಲ್ಲಿ ನಿಶ್ಚಿತಾರ್ಥ ನಡೆದಿತ್ತು. ಏಪ್ರಿಲ್ 17ರಂದು ಮದುವೆ ಎಂದು ತೀರ್ಮಾನಿಸಿದ್ದರು.

ಸೂರ್ಯನಿಗೆ ಕಂಪನಿಯಿಂದ ಎರಡು ತಿಂಗಳ ಕಾಲ ಅಮೆರಿಕಾಗೆ ಹೋಗಲು ಅವಕಾಶ ಸಿಕ್ಕಿತ್ತು. ಈ ಹಿಂದೆ ಅವನು ಎರಡು ಸಲ ಜಪಾನ್‌ಗೆ ಹೋಗಿ ಬಂದಿದ್ದ. ಆದರೆ ಅಮೆರಿಕೆಗೆ ಎಂದೂ ಹೋಗಿರಲಿಲ್ಲ. ತಂದೆತಾಯಿ 'ಈ ಅವಕಾಶ ಬಿಡಬೇಡ. ಹೋಗಿ ಬಾ' ಎಂದು ಒತ್ತಾಯಿಸಿದ್ದರು. ಸುಮೇರು ಕೂಡ, "ಹೋಗು ಸೂರ್ಯ, ಇಂತಹ ಅವಕಾಶ ನಿನಗೆ ಮತ್ತೊಮ್ಮೆ ಸಿಗದಿರಬಹುದು" ಎಂದಿದ್ದ.

"ಅಮೆರಿಕಾಕ್ಕೆ ಹೋದರೆ ನಿನ್ನ ಮದುವೆಗೆ ಬರಕ್ಕಾಗಲ್ಲ ಕಣೋ..."

"ಚಿಂತೆಯಿಲ್ಲ. ಹೇಗೂ ನನ್ನ ಎಂಗೇಜ್ಮೆಂಟ್‌ಗೆ ಬಂದಿದ್ದೆಯಲ್ಲಾ. ಆದರೆ ನಿಮ್ಮ ತಂದೆತಾಯಿ ಮದುವೆಗೆ ಬರಲೇಬೇಕು."

ಸೂರ್ಯ ಅವನ ಬಳಿ ರಚನಾ ವಿಷಯ ಹೇಳಲು ಸಮಯ ಒದಗಿರಲಿಲ್ಲ. ಸುಮೇರು ಫೋನ್ ಮಾಡಿದಾಗಲೆಲ್ಲಾ ಅವನು ಶಿವಾನಿಯ ವಿಚಾರವನ್ನೇ ಹೇಳುತ್ತಿದ್ದ. ಅವಳ ರೂಪ, ನಡವಳಿಕೆ, ಅವಳಿಗೆ ಅಲಂಕಾರದಲ್ಲಿರುವ ಆಸಕ್ತಿ, ಅಡುಗೆಯಲ್ಲಿರುವ ಆಸಕ್ತಿ ಇತ್ಯಾದಿ ವಿಷಯಗಳ ಬಗ್ಗೆ ಕೊರೆಯುತ್ತಿದ್ದ. ತಾವಿಬ್ಬರೂ ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತೇವೆಂದು ನಾನಾ ರೀತಿಯಲ್ಲಿ ವರ್ಣಿಸುತ್ತಿದ್ದ. ಸೂರ್ಯ ಅವನು ಹೇಳಿದ್ದನ್ನೆಲ್ಲಾ ಕೇಳಬೇಕಾಗಿತ್ತು. ಅವನು ಮಾತನಾಡಲು ಸುಮೇರು ಅವಕಾಶವನ್ನೇ ಕೊಡುತ್ತಿರಲಿಲ್ಲ. ಅವನ ಮಾತುಕತೆಗಳಿಂದ ಅವನು ಶಿವಾನಿಯನ್ನು ಬಹಳ ಹಚ್ಚಿಕೊಂಡಿರುವುದು ಸ್ಪಷ್ಟವಾಗಿತ್ತು.

ಮದುವೆ ತುಂಬಾ ಚೆನ್ನಾಗಿ ನಡೆಯಿತೆಂದು ಸೂರ್ಯನ ಅಪ್ಪಅಮ್ಮ ಹೇಳಿದ್ದರು.